# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಸಾರಾಂಶ

(ದಿನಾಂಕ12.07.2019 ರಿಂದ 23.07.2019ರವರೆಗೆ
ಹಾಗೂ 29.07.2019 )

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

**ಕರ್ನಾಟಕ ವಿಧಾನ ಪರಿಷತ್ತು**

**ನೂರ ಮೂವತ್ತೆಂಟನೆಯ ಅಧಿವೇಶನ**

**ಸಾರಾಂಶ**

(ದಿನಾಂಕ12.07.2019 ರಿಂದ 23.07.2019ರವರೆಗೆ
ಹಾಗೂ ದಿನಾಂಕ:29.07.2019)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

## ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರ ಮೂವತ್ತೆಂಟನೆಯ ಅಧಿವೇಶನವು ದಿನಾಂಕ: 12.07.2019 ರಿಂದ 23.07.2019ರ ವರೆಗೆ ಹಾಗೂ ನೂರ ಮೂವತ್ತೆಂಟನೆಯ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ:29.07.2019 ರಂದು ಒಟ್ಟು 08 ದಿನಗಳ ಉಪವೇಶನ ನಡೆಯಿತು. ಅಧಿವೇಶನದ ಒಟ್ಟು ಅವಧಿ 03 ಗಂಟೆ 25 ನಿಮಿಷಗಳು. (**ವಿವರಣಾ ಪಟ್ಟಿ**–1)

### 01. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.**

| ಕ್ರ.ಸಂ. | ಹೆಸರು | ಹೊಂದಿದ ಸ್ಥಾನಮಾನ | ದಿನಾಂಕ |
|---|---|---|---|
| 01 | ಸಿ.ಎಸ್.ಶಿವಳ್ಳಿ | ಪೌರಾಡಳಿತ ಸಚಿವರು ಹಾಗೂ ವಿಧಾನ ಸಭೆಯ ಸದಸ್ಯರು | 12.07.2019 |
| 02 | ಬಸಗೌಡ ಅಪ್ಪಯ್ಯಗೌಡ ಪಾಟೀಲ್ | ಹಿರಿಯ ಗಾಂಧಿವಾದಿ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 12.07.2019 |
| 03 | ಎಸ್.ಎಂ.ಶಂಕರ್ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 12.07.2019 |
| 04 | ವಿ.ಧನಂಜಯ ಕುಮಾರ್ | ಕೇಂದ್ರ ಮಾಜಿ ಸಚಿವರು ಹಾಗೂ ಲೋಕಸಭೆಯ ಮಾಜಿ ಸದಸ್ಯರು ಮತ್ತು ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 05 | ಕೆ.ಎಲ್. ಶಿವಲಿಂಗೇಗೌಡ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 06 | ಎಸ್.ಎಸ್.ಅರಕೇರಿ(ಸಿದ್ದಾರ್ಥ ಸಂಗಪ್ಪ ಅರಕೇರಿ) | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 07 | ದಮಯಂತಿ ಬೋರೇಗೌಡ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 08 | ಚನ್ನವೀರಯ್ಯ ಶಾಂತಯ್ಯ ಮುತ್ತಿನ ಪೆಂಡಿಮಠ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 09 | ಡಾ:ವಿಜಯಕುಮಾರ್ ಖಂಡ್ರೆ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 10 | ಗೋಪಾಲ್ ಭಂಡಾರಿ ಹೆಚ್ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 11 | ಶಾರದವ್ವ ಎಂ.ಪಟ್ಟಣ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 12 | ಡಾ: ಎನ್.ಬಿ. ನಂಜಪ್ಪ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 13 | ಸತ್ಯನಾರಾಯಣ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 14 | ಸಂಭಾಜಿ ಲಕ್ಷ್ಮಣ ಪಾಟೀಲ್ | ವಿಧಾನ ಸಭೆಯ ಮಾಜಿ ಸದಸ್ಯರು | 12.07.2019 |
| 15 | ಡಾ:ಗಿರೀಶ್ ರಘುನಾಥ್ ಕಾರ್ನಾಡ್ | ಜ್ಞಾಪಪೀಠ ಪ್ರಶಸ್ತಿ ಪುರಸ್ಕೃತರು. ಸಾಹಿತಿ, ಚಿತ್ರನಟ ಮತ್ತು ನಿರ್ದೇಶಕರು | 12.07.2019 |
| 16 | ಮಾಸ್ಟರ್ ಹಿರಣಯ್ಯ | ಕನ್ನಡ ರಂಗಭೂಮಿಯ ಹಿರಿಯ | 12.07.2019 |

| | | | |
|---|---|---|---|
| | | ಕಲಾವಿದ, ನಾಟಕಕಾರ, ರಂಗಕರ್ಮಿ | |

## ೦2. ಅಭಿನಂದನೆ ಹಾಗೂ ನೂತನ ಸದಸ್ಯರ ಪರಿಚಯ

ಅ) ದಿನಾಂಕ: **15.07.2019** ರಂದು ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರಾಗಿ ನೇಮಕಗೊಂಡಿರುವ **ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ** ಅವರಿಗೆ ಸದನದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಆ) ದಿನಾಂಕ: **15.07.2019** ರಂದು ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿಗೆ ನೂತನವಾಗಿ ನಾಮನಿರ್ದೇಶನಗೊಂಡಿರುವ ಮಾನ್ಯ ಸದಸ್ಯರಾದ **ಶ್ರೀ ತಿಪ್ಪಣ್ಣ ಕಮಕನೂರು** ಅವರನ್ನು ಸದನಕ್ಕೆ ಪರಿಚಯಿಸಿದರು.

## ೦3 . ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ದಿನಾಂಕ: **16.07.2019** ರಂದು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. **(ವಿವರಣಾ ಪಟ್ಟಿ-2)** ರಲ್ಲಿ ವಿವರಿಸಿದೆ.

## ೦4. ಪ್ರಶ್ನೆಗಳು

ದಿನಾಂಕ:12.07.2019 ರಿಂದ 23.07.2019 ರವರೆಗೆ ನಡೆದ ಅಧಿವೇಶನದಲ್ಲಿ ಒಟ್ಟು 812 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಲಾಗಿರುತ್ತದೆ. ಅವುಗಳ ಪೈಕಿ 03 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 78 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ ಒಟ್ಟು 662 ಪ್ರಶ್ನೆಗಳ ಪೈಕಿ 334 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 48 ಸೂಚನೆಗಳನ್ನು ಸ್ವೀಕರಿಸಿದ್ದು, 10 ಸೂಚನೆಗಳಿಗೆ ಹಾಗೂ ನಿಯಮ 330ರಡಿಯಲ್ಲಿ 30 ಸೂಚನೆಗಳನ್ನು ಸ್ವೀಕರಿಸಿದ್ದು, 09 ಸೂಚನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

## ೦೫. ಪ್ರಕಟಣೆ

೦1. ದಿನಾಂಕ:15.07.2019 ರಂದು ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಸದಸ್ಯರುಗಳ ಪಟ್ಟಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦2. ದಿನಾಂಕ:15.07.2019 ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

## ೦೬. ವರದಿಗಳನೊಪ್ಪಿಸುವುದು

ಪ್ರಸ್ತುತ ಅಧಿವೇಶನದಲ್ಲಿ ಸದನದಲ್ಲಿ ಒಪ್ಪಿಸಲಾದ ವರದಿಗಳ ಮಾಹಿತಿಯನ್ನು ವಿವರಣಾ ಪಟ್ಟಿ – ೩ ರಲ್ಲಿ ವಿವರಿಸಲಾಗಿದೆ.

## ೦7. ಕ್ರಿಯಾಲೋಪ

ದಿನಾಂಕ:15.07.2019 ರಂದು ಮಾನ್ಯ ಶಾಸಕರಾದ ಶ್ರೀ ಆಯನೂರು ಮಂಜುನಾಥ ರವರು "ಸಚಿವ ಸಂಪುಟದ ಸದಸ್ಯರುಗಳು ರಾಜೀನಾಮೆಯನ್ನು ನೀಡಿರುವುದರಿಂದ ಮಾನ್ಯ ಶಾಸಕರುಗಳ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು" ಎಂಬ ಪ್ರಶ್ನೆಯನ್ನು ಕ್ರಿಯಾಲೋಪದ ಮೂಲಕ ಪ್ರಸ್ತಾಪಿಸಿದರು.

## 08. ಧರಣಿ ಮತ್ತು ಸಭಾತ್ಯಾಗ

ದಿನಾಂಕ:15.07.2019, 16.07.2019, 18.07.2019, 22.07.2019 ಮತ್ತು 23.07.2019 ರಂದು ಆಡಳಿತ ಪಕ್ಷದ ಕೆಲವು ಸದಸ್ಯರುಗಳು ಮತ್ತು ಸಚಿವ ಸಂಪುಟದ ಕೆಲವು ಸಚಿವರುಗಳು ರಾಜೀನಾಮೆ ನೀಡಿರುವುದರಿಂದ ಸರ್ಕಾರದ ಅಸ್ಥಿರತೆ ಬಗ್ಗೆ ವಿರೋಧಪಕ್ಷದ ಸದಸ್ಯರುಗಳು ಧರಣಿ ನಡೆಸಿದರು.

## 09. ZÀÄ£ÁªÀuÁ ¥Àæ¸ÁÛªÀ

ದಿನಾಂಕ:22.07.2019 ರಂದು ಮಾನ್ಯ ಸಭಾನಾಯಕರು 2019–20ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಜಂಟಿ ಸಮಿತಿ ಹಾಗೂ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಪ್ರಸ್ತಾವವನ್ನು ಮಂಡಿಸಿದರು.

## 10. ಶಾಸನ ರಚನೆ

ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ಪಟ್ಟಿಯನ್ನು (ವಿವರಣಾ ಪಟ್ಟಿ–4) ರಲ್ಲಿ ತೋರಿಸಲಾಗಿದೆ.

## 11. ವಿತ್ತೀಯ ಕಾರ್ಯಕಲಾಪ

ದಿನಾಂಕ:29.07.2019 ರಂದು ಶ್ರೀ ಬಿ.ಎಸ್.ಯಡಿಯೂರಪ್ಪ, (ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು 2019–20ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸದನದಲ್ಲಿ ಮಂಡಿಸಿದರು.

## 12. ಅಧಿವೇಶನ ಮುಂದೂಡಿಕೆ

ದಿನಾಂಕ:12.07.2019ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 138ನೆಯ ಅಧಿವೇಶನವನ್ನು ದಿನಾಂಕ:23.07.2019 ರಂದು ಹಾಗೂ ದಿನಾಂಕ:29.07.2019 ರಂದು ನಡೆದ 138ನೇ ಅಧಿವೇಶನದ ಮುಂದುವರೆದ ಉಪವೇಶನವನ್ನು ದಿನಾಂಕ:29.07.2019ರಂದು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

## ವಿವರಣಾ ಪಟ್ಟಿ-1

| ಕ್ರ.ಸಂ. | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ |
|---|---|---|---|---|
| 01 | 12.07.2019 | ಮ:01.02 | ಮ:02.24 | 01.22 |
| 02 | 15.07.2019 | ಮ:12.18<br>ಮ:01.20 | ಮ:12.36<br>ಮ:01.25 | 00.18<br>00.05 |
| 03 | 16.07.2019 | ಮ:12.15<br>ಮ:12.55 | ಮ:12.22<br>ಮ:01.05 | 00.07<br>00.10 |
| 04 | 18.07.2019 | ಬೆ:11.35<br>ಮ:03.42<br>ಸ:06.03 | ಬೆ:11.37<br>ಮ:03.45<br>ಸ:06.05 | 00.02<br>00.03<br>00.02 |
| 05 | 19.07.2019 | ಮ:12.10<br>ಮ:03.40 | ಮ:12.15<br>ಮ:03.45 | 00.05<br>00.05 |
| 06 | 22.07.2019 | ಮ:01.02 | ಮ:01.06 | 00.04 |
| 07 | 23.07.2019 | ಬೆ:11.44<br>ರಾ:07.57 | ಬೆ:11.45<br>ರಾ:08.05 | 00.01<br>00.09 |
| 08 | 29.07.2019 | ಮ:03.35 | ಸ:04.27 | 00.52 |
| | | | **ಒಟ್ಟು ಸಮಯ** | **03.25** |

**ವಿವರಣಾ ಪಟ್ಟಿ-02**
**ಕಾರ್ಯದರ್ಶಿಯವರ ವರದಿ**
**ಘನತೆವೆತ್ತ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ**

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01. | ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ)ವಿಧೇಯಕ, 2018 | 18.07.2018 | ರಾಜ್ಯಪಾಲರು |
| 02. | ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) ವಿಧೇಯಕ, 2016 | 13.08.2018<br>21.01.2019 | ರಾಷ್ಟ್ರಪತಿಯವರು<br>ರಾಜ್ಯಪಾಲರು |
| 03. | ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ)ವಿಧೇಯಕ, 2018 | 28.12.2018 | ರಾಜ್ಯಪಾಲರು |
| 04 | ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) (ತಿದ್ದುಪಡಿ)ವಿಧೇಯಕ, 2018 | 19.01.2019 | ರಾಜ್ಯಪಾಲರು |
| 05 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ)ವಿಧೇಯಕ, 2018 | 21.01.2019 | ರಾಜ್ಯಪಾಲರು |
| 06 | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ)ವಿಧೇಯಕ, 2018 | 21.01.2019 | ರಾಜ್ಯಪಾಲರು |
| 07 | ಕರ್ನಾಟಕ ವಿಧಾನ ಮಂಡಲ(ಅನರ್ಹತಾ ನಿವಾರಣಾ)(ತಿದ್ದುಪಡಿ)ವಿಧೇಯಕ, 2018 | 07.02.2019 | ರಾಜ್ಯಪಾಲರು |
| 08 | ಕರ್ನಾಟಕ ಧನವಿನಿಯೋಗ ವಿಧೇಯಕ, 2019 | 27.02.2019 | ರಾಜ್ಯಪಾಲರು |
| 09 | ಕರ್ನಾಟಕ ಧನವಿನಿಯೋಗ (ಲೇಖಾನುದಾನ)ವಿಧೇಯಕ, 2019 | 27.02.2019 | ರಾಜ್ಯಪಾಲರು |
| 10 | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ)ವಿಧೇಯಕ, 2018 | 28.02.2019 | ರಾಜ್ಯಪಾಲರು |

| | | | |
|---|---|---|---|
| 11 | ಎನ್ಐಇ ವಿಶ್ವವಿದ್ಯಾಲಯ ವಿಧೇಯಕ, 2019 | 28.02.2019 | ರಾಜ್ಯಪಾಲರು |
| 12 | ಆದಿಚುಂಚನಗಿರಿ ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕ, 2019 | 28.02.2019 | ರಾಜ್ಯಪಾಲರು |
| 13 | ಬಸವಕಲ್ಯಾಣ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2019 | 28.02.2019 | ರಾಜ್ಯಪಾಲರು |
| 14 | ಆರ್.ವಿ.ವಿಶ್ವವಿದ್ಯಾಲಯ ವಿಧೇಯಕ, 2019 | 28.02.2019 | ರಾಜ್ಯಪಾಲರು |
| 15 | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2019 | 01.03.2019 | ರಾಜ್ಯಪಾಲರು |

**ವಿವರಣಾ ಪಟ್ಟಿ –03**
**ಸದನಕ್ಕೆ ಒಪ್ಪಿಸಲಾದ ವರದಿಗಳ ಪಟ್ಟಿ**

| ಕ್ರ. ಸಂ | ಸಮಿತಿಯ ಹೆಸರು | ಒಪ್ಪಿಸಿದ ದಿನಾಂಕ | ವರದಿಯ ಸಂಖ್ಯೆ |
|---|---|---|---|
| 01 | ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿ | 16.07.2019 | 95ನೇ ವರದಿ |
| 02 | ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ | 16.07.2019 | 47ನೇ ವರದಿ |

**ವಿವರಣಾ ಪಟ್ಟಿ –04**
**ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ**
**ಸಹಮತಿ ಪಡೆದಿರುವ ವಿಧೇಯಕಗಳ ವಿವರ**

| **ಕ್ರ ಸಂ** | **ವಿಧೇಯಕದ ಹೆಸರು** | **ವಿ .ಸ ಅಂಗೀಕರಿಸಿರುವ ದಿನಾಂಕ** | **ವಿ. ಪ ಅಂಗೀಕರಿಸಿರುವ ದಿನಾಂಕ** |
|---|---|---|---|
| 01 | ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ, 2019 | 29.07.2019 | 29.07.2019 |
| 02 | ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ-2) ವಿಧೇಯಕ, 2019 | 29.07.2019 | 29.07.2019 |

****